ಸಂಜೆ ಸಮಾಚಾರ್
www.sanjesamachar.com
15 Jan 2024 - Page 4

ಪತ್ರಿಕಾ ರಂಗದ ಮೌಲ್ಯ ಕುಸಿತ ಹೊರಟ್ಟಿ ಕಳವಳ

ಧಾರವಾಡ : ಪತ್ರಿಕಾ ರಂಗದಲ್ಲಿಯ ಮೌಲ್ಯಗಳ ಕುಸಿತ ನಿಜಕ್ಕೂ ಆಘಾತಕಾರಿಯಾಗಿದೆ ಎಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಇಲ್ಲಿ ಅಭಿಪ್ರಾಯ ಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಹಿರಿಯ ಪತ್ರಕರ್ತ, ಸಾಹಿತಿ ಮನೋಜ ಪಾಟೀಲ ಅವರ 21 ವಿವಿಧ ವಿಷಯಗಳ ಮೇಲಿನ ಲೇಖನಗಳ ಸಂಗ್ರಹ 'ಮುಕ್ತ' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡುತ್ತಿದ್ದರು.

ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ರಾಮಕೃಷ್ಣ ಹೆಗಡೆ ಅವರು ಪತ್ರಿಕಾ ರಾಜಕಾರಣ ಪ್ರವೇಶಿಸುವ ಕಾಲದಲ್ಲಿ ನಾನು ರಾಜಕೀಯಕ್ಕೆ ಬಂದವನು. ಒಂದು ಕಾಲಕ್ಕೆ ಪಾರ್ಲಿಮೆಂಟ್ ಸದಸ್ಯರಲ್ಲಿ ಪ್ರೆಸ್ ಗ್ಯಾಲರಿ ನೋಡಿ ಮಾತನಾಡುವ ಶಾಸಕರ ಸಂಖ್ಯೆ ಹೆಚ್ಚಿದ್ದು, ಇದರ ಅರ್ಥ ನಮ್ಮ ಮಾತುಗಳನ್ನು ಅರ್ಥೈಸಿಕೊಳ್ಳಬಲ್ಲವರು ಪತ್ರಕರ್ತರು ಎಂಬ ಭಾವನೆ ಇತ್ತು ಎಂದ ಹೊರಟ್ಟಿ ಈಗಿಗ 'ಮಾಯ ನೋಡಿ ಬರೆಯುವ ಪ್ರವೃತ್ತಿ ಪತ್ರಕರ್ತರಲ್ಲಿ ಹೆಚ್ಚಿದೆ. ಹೀಗಾಗಿ

'ಮುಕ್ತ' ಪುಸ್ತಕವನ್ನು ಮುಕ್ತ ಕಂಠದಿಂದ ಹೊಗಳಿದ ಹೊರಟ್ಟಿ ಅವರು ಪತ್ರಕರ್ತ ಮನೋಜ ಪಾಟೀಲ ಅವರು ನನ್ನ ಆತ್ಮೀಯ ಸ್ನೇಹಿತರು. ಪತ್ರಿಕೋದ್ಯಮದಲ್ಲಿ ಅವರ ಸಾಧನೆ ಅಪಾರವಾಗಿದ್ದಾರೆ ಎಂದವರು ಹೇಳಿ ಅವರಿಂದ ಇಂತಹ ಪುಸ್ತಕಗಳು ಇನ್ನಷ್ಟು ಬರಲಿ ಎಂದವರು ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಮತ್ತು ಕ.ವಿ ಸಂಘದ ಉಪಾಧ್ಯಕ್ಷ ಪ್ರೊ. ಮಹಾಲಿಂ ಪಟ್ಟಣಶೆಟ್ಟಿ ಅವರು ಮಾತನಾಡಿ ಮುಕ್ತ ಪುಸ್ತಕದ ಲೇಖಕರನ್ನು ಶ್ಲಾಘಿಸಿದರು. ನಿರಂತರ ಅಧ್ಯಯನದಿಂದ ಸಮಚಿತ್ತದಿಂದ ಹೃದಯದಿಂದ ಬರೆದ ಪರಿಣಾಮ ಭಾಷೆಯನ್ನು ಮುಕ್ತದಲ್ಲಿ ಬಳಸಿದ್ದಾರೆ ಎಂದವರು ಹೇಳಿದರು.

'ಮುಕ್ತ' ಬಗ್ಗೆ ಮಾತನಾಡಿದ ಸಂಯುಕ್ತ ಕರ್ನಾಟಕ ಪತ್ರಿಕೆ ಕಾರ್ಯನಿರ್ವಾಹಕ ಸಂಪಾದಕ ಮೋಹನ ಹೆಗಡೆ ಅವರು ಮಾತನಾಡಿ ಮುಕ್ತ ಪುಸ್ತಕದಲ್ಲಿ ಹಲವು ವಿಷಯಗಳು ಅಚ್ಚಾಯಮಾನವಾಗಿ ಬಂದಿವೆ. ಉದಯೋನ್ಮುಖ ಪತ್ರಕರ್ತರು ಮತ್ತು ಪರಾಧ್ಯಮ ವಿದ್ಯಾರ್ಥಿಗಳಲ್ಲಿ ಈ ಪುಸ್ತಕದ ಬಗ್ಗೆ ಅಧ್ಯಯನ ಅಗತ್ಯ ಎಂದವರು ಹೇಳಿದರು. ರಾಜ್ಯ ಹಿಡಬ್ಲ್ಯೂಡಿ ಇಲಾಖೆ ಹಿಂದಿನ ಕಾರ್ಯದರ್ಶಿ ಜೆ.ಸಿ ಕಲ್ಲೂರ ಅವರು ಮಾತನಾಡಿ 'ಮುಕ್ತ'ವನ್ನು